# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 26-03-2021 ಪ್ರಶ್ನೆ ಸಂಖ್ಯೆ : 1960(2279)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸುನೀಲ್ ಗೌಡ ಬಸನಗೌಡ ಪಾಟೀಲ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 26-03-2021

ಉತ್ತರಿಸುವ ಸಚಿವರು: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ವಿಷಯ : ಗ್ರಾಮ ಪಂಚಾಯತ್ ಸಿಬ್ಬಂದಿ ಇಲಾಖಾ ಪರೀಕ್ಷೆ ಮತ್ತು ಮುಂಬಡ್ತಿ ಕುರಿತು

(ಅ) ಇಲಾಖಾ ಪರೀಕ್ಷೆಗಳನ್ನು ಬರೆಯಲು ಅರ್ಹತೆ ಇರದ ಗ್ರಾಮ ಪಂಚಾಯತಿ ಸಿಬ್ಬಂದಿಗಳು ಅಕ್ರಮವಾಗಿ ಪರೀಕ್ಷೆ ಬರೆದು ಪಡೆದಿರುವ ಪ್ರಮಾಣ ಪತ್ರಗಳನ್ನು ನೀಡಿ ಸರ್ಕಾರಿ ಸೇವೆಯ ಪರೀಕ್ಷಾರ್ಥ ಅವಧಿ ಘೋಷಣೆ ಹಾಗೂ ಮುಂಬಡ್ತಿ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, 1994 ರಿಂದ 2021ರವರೆಗೆ ಈ ರೀತಿ ಅಕ್ರಮ ಪರೀಕ್ಷಾರ್ಥ ಅವಧಿ ಘೋಷಣೆ ಹೊಂದಿದ ನೌಕರರ ಸಂಖ್ಯೆ ಎಷ್ಟು; ಸಂಪೂರ್ಣ ಸೇವಾ ವಿವರ ನೀಡುವುದು; (ಇಲಾಖಾ ಪರೀಕ್ಷೆ ಪ್ರಮಾಣ ಪತ್ರಗಳು, ನೇಮಕಾತಿ ಪತ್ರ, ಪರೀಕ್ಷಾರ್ಥ ಅವಧಿ ಹಾಗೂ ಬಡ್ತಿ ಆದೇಶ ಪ್ರತಿಗಳನ್ನು ಒದಗಿಸುವುದು)

(ಆ) ಈ ರೀತಿ ಅಕ್ರಮವಾಗಿ ಸರ್ಕಾರಿ ನೌಕರಿ ಪಡೆದ ನೌಕರರ ಪಟ್ಟಿ ನೀಡುವುದು ಮತ್ತು ಇವರ ಮೇಲೆ ಸರ್ಕಾರ ಯಾವ ಶಿಸ್ತು ಕ್ರಮ ಕೈಗೊಂಡಿದೆ ಅಥವಾ ಕೈಗೊಳ್ಳಲು ಉದ್ದೇಶಿಸಿದೆ; (ವಿವರ ನೀಡುವುದು)

(ಇ) ಕ್ರಮಕೈಗೊಳ್ಳದೆ ಇದ್ದಲ್ಲಿ, ಇದಕ್ಕೆ ಕಾರಣಗಳೇನು; (ಕಾರಣರಾದ ನೌಕರರ ಹೆಸರು ಮತ್ತು ಪದನಾಮ ವಿವರ ಒದಗಿಸುವುದು)

(ಈ) ಜಿಲ್ಲಾ ಪಂಚಾಯತ್ ವಿಜಯಪುರ ಇವರು ಅಕ್ರಮ ಇಲಾಖಾ ಪರೀಕ್ಷೆಯ ಪ್ರಮಾಣ ಪತ್ರಗಳನ್ನು ಪರಿಗಣಿಸುವ ಕುರಿತು ಮಾರ್ಗದರ್ಶನ/ಅಭಿಪ್ರಾಯ ಕೋರಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೋರಿದ್ದು, ಈ ಬಗ್ಗೆ ಸರ್ಕಾರ ಯಾವ ಆದೇಶ ಹೊರಡಿಸಿದೆ; ಆದೇಶ ಹೊರಡಿಸದೇ ಇದ್ದಲ್ಲಿ ಕಾರಣಗಳೇನು; ಈ ಕುರಿತು ಸರ್ಕಾರದ ನಿಲುವೇನು; ಯಾವ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದೆ; (ಈ ವಿಳಂಬಕ್ಕೆ ಕಾರಣರಾದ ಅಧಿಕಾರಿ/ಸಿಬ್ಬಂದಿಯ ಹೆಸರು ಮತ್ತು ಪದನಾಮ ತಿಳಿಸುವುದು)

(ಉ) ಕರ್ನಾಟಕ ಆಡಳಿತ ನ್ಯಾಯಮಂಡಳಿ ಪ್ರಕರಣ ಸಂಖ್ಯೆ 5444 ರಿಂದ 5485/2018 ಆದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಆದೇಶದ ಪ್ರಕಾರ ಪಿ.ಡಿ.ಓಗಳ ರಾಜ್ಯ ಜೇಷ್ಠತಾ ಪಟ್ಟಿ ತಯಾರಿಸಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣ ನೀಡುವುದು;

(ಊ) ಪಿ.ಡಿ.ಓ ಜೇಷ್ಠತಾ ಪಟ್ಟಿಯನ್ನು ಯಾರು ತಯಾರಿಸುತ್ತಾರೆ ಅವರ ಹೆಸರು ಮತ್ತು ಪದನಾಮ ತಿಳಿಸುವುದು; ಮತ್ತು ಜೇಷ್ಠತಾ ಪಟ್ಟಿ ತಯಾರಿಸದೆ ಇರಲು ಕಾರಣ ನೀಡುವುದು;

(ಋ) ಪಿ.ಡಿ.ಓ ಗಳ ಜೇಷ್ಠತಾ ಪಟ್ಟಿಗೆ ತಾತ್ಕಾಲಿಕ ತಡೆ ನೀಡಲು ಕಾರಣಗಳೇನು; ಈ ಕುರಿತು ಸರ್ಕಾರದ ನಿಲುವೇನು?